ದಿನಾಂಕಃ **28-02-2023** ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಶ್ರೀ ಎಂ ಡಿ ವಕೀಲರಿಂದಃ

3. ಈ ಕೇಸನ್ನು ಬಿಟ್ಟು ಬೇರೆ ಯಾವುದೇ ಚೆಕ್ ಬೌನ್ಸ್ ಕೇಸನ್ನು ಹಾಕಿರುವುದಿಲ್ಲ. ನನ್ನ ಹೆಂಡತಿಯ ಅಣ್ಣನಾದ ಮಂಜುನಾಥ್ ರವರು ಯಾವುದೇ ವ್ಯವಹಾರ ಆರೋಪಿಯ ಜೊತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಮಂಜುನಾಥ ರವರಿಗೆ ಆರೋಪಿಗೆ ಸೇರಿದ ಇನ್ನೊಂದು ಚೆಕ್ ಕೊಟ್ಟು ಇನ್ನೊಂದು ಕೇಸನ್ನು ಆರೋಪಿಯ ವಿರುದ್ಧ ಹಾಕಿದೀವಿ ಎಂದರೆ ಸರಿಯಲ್ಲ. ಆರೋಪಿಗೆ ಚೆಕ್ ನ್ನು ಹೊರತು ಪಡಿಸಿ ಹಣ ಕೊಟ್ಟಿರುವುದಕ್ಕೆ ಬೇರೆ ದಾಖಲಾತಿಗಳು ಇವೆಯಾ ಎಂದರೆ ಸಾಕ್ಷಿ ಚೆಕ್ ಕೊಟ್ಟಿರುತ್ತಾರೆ. ಆರೋಪಿಗೆ ನಾನು ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ 3-4 ಬ್ಯಾಂಕ್ ನಲ್ಲಿ ಖಾತೆ ಇದೆ. ನಾನು ಆದಾಯ ತೆರಿಗೆದಾರರು ಅಲ್ಲ. ನನಗೆ ಬ್ಯಾಂಕಿನ ವ್ಯವಹಾರ ಅರಿವು ಇದೆ ಎಂದರೆ ಅಷ್ಟು ಏನೂ ಇಲ್ಲ ಎನ್ನುತ್ತಾರೆ. ಚೆಕ್ ಮೂಲಕ ಆರೋಪಿಗೆ ಹಣ ಕೊಡಲು ನಿಮಗೇನಾದರೂ ತೊಂದರೆ ಇತ್ತ ಎಂದರೆ ಸಾಕ್ಷಿ ಮನೆಯಲ್ಲಿ ಹಣ ಇತ್ತು ಅದರಿಂದ ಚೆಕ್ ಮೂಲಕ ನಾನು ಕೊಟ್ಟಿರುವುದಿಲ್ಲ. ನಾನು ಹಣ ಕೊಡುವ ಸಮಯದಲ್ಲಿ ನನಗೆ ಸೇರಿದವರು ಅಥವಾ ಆರೋಪಿಗೆ ಸೇರಿದವರು ಯಾರಾದರು ಇದ್ದರ ಎಂದರೆ ಸಾಕ್ಷಿ ಆರೋಪಿಗೆ ಸೇರಿದವರು ಒಬ್ಬರು ಇದ್ದರು ಆದರೆ ಅವರ ಹೆಸರು ಗೊತ್ತಿಲ್ಲ. ನಾನು ಡಾಬಾದಲ್ಲಿ ಕೆಲಸ ಮಾಡುವುದನ್ನು ಬಿಟ್ಟು ಬೇರೆ ಯಾವುದೇ ಆದಾಯ ಇಲ್ಲ.

4. ನನಗೆ ವಾರ್ಷಿಕವಾಗಿ 1 ವರೆ ಲಕ್ಷ ರೂ ಆದಾಯ ಇರುತ್ತದೆ. ವಾರ್ಷಿಕವಾಗಿ ಖರ್ಚನ್ನು ಬಿಟ್ಟು ಆದಾಯ ನನಗೆ 1 ವರೆ ಲಕ್ಷ ರೂಪಾಯಿ ಇದೆ. ನನ್ನ ಆದಾಯದ ಪ್ರಕಾರ 2 ವರೆ ಲಕ್ಷ ಹಣವನ್ನು ಕೂಡಿ ಇಡಲು 2 ವರ್ಷ ಬೇಕಾಗುತ್ತದೆ ಎಂದರೆ ಸರಿ. ನಾನು ಬಡ್ಡಿಗೆ ಹಣವನ್ನು ಕೊಟ್ಟಿರುವುದಿಲ್ಲ. ನಾನು 2 ವರೆ ಲಕ್ಷ ಕೂಡಿ ಇಟ್ಟಿರುವುದಕ್ಕೆ ಯಾವುದೇ ದಾಖಲಾತಿಯನ್ನು ನ್ಯಾಯಲಯದ ಮುಂದೆ ಹಾಜರು ಪಡಿಸಿರುವುದಿಲ್ಲ. ನಾನು ಸುಳ್ಳು ದಾಖಲಾತಿಯನ್ನು ಸಲ್ಲಿಸಿದೀನಿ ಅದರಿಂದ ಹಣ ಕೂಡಿಸಿ ಇಟ್ಟಿರುವುದಕ್ಕೆ ಯಾವುದೇ ದಾಖಲಾತಿ ನನ್ನ ಬಳಿ ಇಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿರುವ ಬರವಣಿಗೆ ಆರೋಪಿಯ ಸ್ನೇಹಿತರು ಬರೆದಿರುತ್ತಾರೆ ಅವರ ಹೆಸರು ವಿಳಾಸ ನನಗೆ ಗೊತ್ತಿಲ್ಲ. ಆರೋಪಿಗೆ ಹಣ ಕೊಡುವಂತಹ ಆರ್ಥಿಕ ಸಾಮರ್ಥ್ಯ ನನಗೆ ಇಲ್ಲ ಮತ್ತು ಆರೋಪಿಗೆ ಹಣದ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಭಾವನಾದ ಮಂಜುನಾಥ ರವರು ಸೇರಿಕೊಂಡು ಆರೋಪಿಯ ವಿರುದ್ಧ ಅಕ್ರಮ ಲಾಭ ಪಡೆಯಲು ಅವರ ವಿರುದ್ದ. ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸಿಸಿ 297/2019 ರಲ್ಲಿ ರಾಜಿ ಮಾಡಿಕೊಂಡರೂ ಕೂಡ ರಾಜೀ ಆಗಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿತಾ ಇದ್ದೀನಿ ಎಂದರೆ ಸರಿಯಲ್ಲ. ಆರೋಪಿಗೆ ಹಣ ಕೊಟ್ಟಿರುವ ಹಣವನ್ನು ಮನೆಯಲ್ಲಿ ಸಂಗ್ರಹಿಸಿ ಇಟ್ಟಿರುವ ಬಗ್ಗೆ ನನ್ನ ಲಿಖಿತ ತಿಳುವಳಿಕೆ ಪತ್ರದಲ್ಲಾಗಲೀ ದೂರಿನಲ್ಲಾಗಲೀ ಅಥವಾ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಾಗಲೀ ತಿಳಿಸಿರುತ್ತೇನೆ ಎನ್ನುವುದು ನನಗೆ ಗೊತ್ತಿಲ್ಲ. ನನ್ನ ಆದಾಯದ ಪ್ರಕಾರ ತಿಂಗಳಿಗೆ 10 ಸಾವಿರ ರೂ. ಉಳಿತಾಯ ಮಾಡಬಹುದು ಎಂದರೆ ಸರಿ. ನಾನು ಸುಮಾರು ಚೆಕ್ ಬೌನ್ ಕೇಸುಗಳನ್ನು ಬೇರೆ ಬೇರೆವ್ಯಕ್ತಿ ಮೇಲೆ

ಹಾಕಿರುತ್ತೇನೆ ಎಂದರೆ ಸರಿಯಲ್ಲ. ಅಕ್ರಮ ಲಾಭ ಪಡೆಯಲು ಆರೋಪಿ ವಿರುದ್ಧ ಸುಳ್ಳು ದೂರನ್ನು ಸಲಿಸ್ಲಿದೀನಿ ಎಂದರೆ ಸರಿಯಲ್ಲ. ಈ ವಿಚಾರಕ್ಕೆ ಸಂಬಂಧಪಟ್ಟಿರುವ ಹಾಗೆ ಆರೋಪಿಯವರು ನನ್ನ ವಿರುದ್ಧ ನಗರ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ಪೊಲೀಸರು ಠಾಣೆಗೆ ಕರೆದು ನನ್ನನ್ನು ವಿಚಾರ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿತಾ ಇದ್ದೀನಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.